(1)
(9)

# ಕರ್ನಾಟಕ ವಿಧಾನ ಪರಿಷತ್

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಪ್ರತಾಪ ಸಿಂಹ ನಾಯಕ್ (ವಿಧಾನಸಭೆ ಚುನಾವಣಾ ಕ್ಷೇತ್ರ) ರವರು ನಿಯಮ–330ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ.

**ವಿಷಯ:** ರಾಜ್ಯದ ಇತರೆಲ್ಲ ಭಾಗಗಳಿಂದ ಕರಾವಳಿಗೆ ಸಂಪರ್ಕ ಕೊಂಡಿಯಾಗಿರುವ ಘಾಟಿ ರಸ್ತೆಗಳು ಪ್ರತೀ ಮಳೆಗಾಲದಲ್ಲಿ ಅಲ್ಲಲ್ಲಿ ಕುಸಿತ ಉಂಟಾಗಿ ಸಂಚಾರ ಬಂದ್ ಆಗುವುದು ಮಾಮೂಲಿಯಾಗಿದ್ದು, ಶಿರಾಡಿ, ಚಾರ್ಮಾಡಿ, ಆಗುಂಬೆ, ಸಂಪಾಜೆ, ಬಿಸಿಲೆ, ಬಾಳೆಬರೆ, ನಿಟ್ಟೂರು ಈ 7 ಘಾಟಿಗಳು ಕರಾವಳಿಯ ಸಂಪರ್ಕ ಕೊಂಡಿಗಳಾಗಿವೆ.

ಪೂರ್ಣ ಮಳೆಗಾಲ ಆರಂಭವಾಗುವ ಮೊದಲೇ ಹೆದ್ದಾರಿ ಕುಸಿತ ಉಂಟಾಗಿ ಸಂಚಾರ ವ್ಯತ್ಯಯವಾಗುವುದನ್ನು ತಪ್ಪಿಸಲು ಸುರಕ್ಷಿತ ಕ್ರಮಗಳು ಈಗಾಗಲೇ ಪೂರ್ಣಗೊಳ್ಳಬೇಕಿತ್ತು. ಆದರೆ ಘಾಟಿ ಪರಿಸರದಲ್ಲಿ ಬರುವ ಹೆದ್ದಾರಿಯಲ್ಲಿ ಕುಸಿತ ಉಂಟಾಗಿ ಪದೇಪದೇ ಸಂಚಾರ ವ್ಯತ್ಯಯವಾಗುತ್ತಿದ್ದರೂ ಸರ್ಕಾರ ಇದುವರೆಗೂ ಯಾವುದೇ ಮಾಸ್ಟರ್ ಪ್ಲ್ಯಾನ್ ರೂಪಿಸಿದಂತಿಲ್ಲ. ಅಪಾಯಕಾರಿ ಘಾಟಿ ಹೆದ್ದಾರಿ ವ್ಯಾಪ್ತಿಯಲ್ಲಿ ಸಂಚಾರ ಹಳಿ ತಪ್ಪದಂತೆ ನೋಡಿಕೊಳ್ಳಲು ಸರ್ಕಾರ ಶಾಶ್ವತ ಮತ್ತು ದೀರ್ಘಕಾಲಿಕ ಉಪಯೋಗದ ಯೋಜನೆಯನ್ನು ಇದುವರೆಗೂ ರೂಪಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

********

## ಸರ್ಕಾರದ ಉತ್ತರ

ಕರಾವಳಿ ಸಂಪರ್ಕ ಕೊಂಡಿಗಳಾಗಿರುವ ಘಾಟ್ ಪರಿಸರದಲ್ಲಿ ಒಳಪಟ್ಟಿರುವ 7 ಘಾಟ್‌ಗಳ ಪೈಕಿ 5 ಘಾಟ್‌ಗಳು ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಗೆ ಒಳಪಡುತ್ತದೆ. ಸದರಿ ಘಾಟ್‌ಗಳ ಭಾಗದಲ್ಲಿ ಹಾದು ಹೋಗುವ ಹೆದ್ದಾರಿಗಳಲ್ಲಿ ಮಳೆಯಿಂದಾಗಿ ಸಂಭವಿಸುವ ಗುಡ್ಡಗಳ ಕುಸಿತಗಳನ್ನು ಹಾಗಿಂದಾಗೆ ತೆರವುಗೊಳಿಸಲು ಆದ್ಯತೆಯ ಮೇರೆಗೆ ಅಗತ್ಯವಿರುವ ಘಾಟ್‌ಗಳಲ್ಲಿ ದಿನದ 24 ಘಂಟೆಯೂ ಗಸ್ತು ತಿರುಗಲು ಒಂದು ಮೊಬೈಲ್ ಗ್ಯಾಂಗ್ ನಿಯೋಜಿಸಲಾಗುತ್ತದೆ, ಸದರಿ ಮೊಬೈಲ್ ಗ್ಯಾಂಗ್‌ರವರಿಂದ ಭೂ ಕುಸಿತ ಹಾಗೂ ಹೆದ್ದಾರಿಗಳಲ್ಲಿ ಬಿದ್ದಿರುವ ಮರಗಳನ್ನು ಕೂಡಲೇ ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವುಮಾಡಿಕೊಡಲಾಗುತ್ತದೆ. ಅಲ್ಲದೆ, ನಿರ್ವಹಣೆ ಯೋಜನೆಗಳಾದ ನಿಯತಾಕಾಲಿಕ ನವೀಕರಣ, Short Term Maintenance Contract (STMC) ಮತ್ತು Performance Based Maintenance Contract (PBMC) ಯೋಜನೆಗಳಡಿ ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ. ಹಾಗೂ 2 ಘಾಟ್‌ಗಳು ಲೋಕೋಪಯೋಗಿ ಇಲಾಖೆ ಕೇಂದ್ರ ವಲಯ ವ್ಯಾಪ್ತಿಗೆ ಒಳಪಡುತ್ತಿದ್ದು ಹೆದ್ದಾರಿ ಕುಸಿತ ಅಥವಾ ಗುಡ್ಡಕುಸಿತವಾಗಿ ಇದುವರೆಗೂ ಯಾವುದೇ ಅಡಚಣೆಯಾಗದಂತೆ ವಾಹನಗಳ ಸಂಚಾರವಾಗುತ್ತಿದ್ದು, ಸಂಚಾರಕ್ಕೆ ಯಾವುದೇ ವ್ಯತ್ಯಯ ಉಂಟಾಗಿರುವುದಿಲ್ಲ.

ಸದರಿ ರಸ್ತೆಗಳಲ್ಲಿ ಕೈಗೆತ್ತಿಕೊಂಡ ಕಾಮಗಾರಿಗಳ ವಿವರಗಳು ಈ ಕೆಳಕಂಡತ್ತಿದೆ.

### 1. ಶಿರಾಡಿ ಘಾಟ್ :

- ಶಿರಾಡಿ ಘಾಟ್‌ನ ಭಾಗವು ರಾಷ್ಟ್ರೀಯ ಹೆದ್ದಾರಿ–75ರ ಕಿ.ಮೀ 59.100(ಅಡ್ಡಹೊಳೆ) ರಿಂದ ಕಿ.ಮೀ 85.100(ಮಾರನಹಳ್ಳಿ) ವರೆಗೆ ಒಟ್ಟು 26.00 ಕಿ.ಮೀ ಉದ್ದವಿರುತ್ತದೆ.

- 2018–19ನೇ ಸಾಲಿನಲ್ಲಿ ಶಿರಾಡಿ ಘಾಟ್ ರಸ್ತೆಯ ಆಯ್ದ ಭಾಗಗಳಲ್ಲಿ ಭೂಕುಸಿತ ಉಂಟಾಗಿದ್ದು, ಇದರ ಶಾಶ್ವತ ದುರಸ್ಥಿಪಡಿಸುವ ಕಾಮಗಾರಿಯು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದಿಂದ ರೂ. 36.52 ಕೋಟಿ ಮೊತ್ತಕ್ಕೆ ದಿನಾಂಕ:21.01.2020 ರಂದು ಮಂಜೂರಾಗಿರುತ್ತದೆ. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಈಗಾಗಲೇ ಶೇ 90% ರಷ್ಟು ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

- ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಶಿರಾಡಿ ಘಾಟ್ ಭಾಗದ ಕಿ.ಮೀ 59.100(ಅಡ್ಡಹೊಳೆ) ರಿಂದ ಕಿ.ಮೀ 85.100(ಮಾರನಹಳ್ಳಿ) ವರೆಗೆ ಒಟ್ಟು 26.00 ಕಿ.ಮೀ ಅನ್ನು ದ್ವಿಪಥ ದಿಂದ ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು ವಿಸ್ಕೃತಾ ಯೋಜನಾ ವರದಿ ತಯಾರಿಸುವ ಕಾರ್ಯಕ್ಕೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

- ಇದರ ಜೊತೆಗೆ 2023–24ನೇ ಸಾಲಿಗೆ ವಾರ್ಷಿಕ ನಿರ್ವಹಣೆ ಕಾಮಗಾರಿಯನ್ನು ಮುಂದಿನ 5 ವರ್ಷದವರೆಗೆ ರೂ.18.75 ಕೋಟಿ ಮೊತ್ತದಲ್ಲಿ ಕೈಗೊಳ್ಳಲು ಗುತ್ತಿಗೆ ನಿಗಧಿಪಡಿಸಲಾಗಿದ್ದು ಜಂಗಲ್ ತೆಗೆಯುವುದು, ಅಡ್ಡಮೋರಿಗಳ ನಿರ್ವಹಣೆ, ಗುಂಡಿ ಮುಚ್ಚುವ ಕೆಲಸವನ್ನು ನಿರ್ವಹಿಸಲಾಗುತ್ತಿದೆ.

**2. ಚಾರ್ಮಾಡಿ ಘಾಟ್:**

- ಚಾರ್ಮಾಡಿ ಘಾಟ್‌ನ ಭಾಗವು ರಾಷ್ಟ್ರೀಯ ಹೆದ್ದಾರಿ – 73ರ (ಹಳೆ ರಾ.ಹೆ.234) ಕಿ.ಮೀ 19.80 ರಿಂದ 99.200 ವರೆಗೆ ಇದ್ದು, ಒಟ್ಟು ಉದ್ದ 79.40 ಕಿ.ಮೀ. ಆಗಿರುತ್ತದೆ.
- ಈ ಉದ್ದದಲ್ಲಿ ಕಿ.ಮೀ.75.00 ರಿಂದ ಕಿ.ಮೀ.86.200 ಆಯ್ದಭಾಗಗಳಲ್ಲಿ ಮಳೆಯಿಂದಾಗಿ ಭೂಕುಸಿತ ಉಂಟಾದ ಪ್ರದೇಶಗಳಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು 2021–22ನೇ ಸಾಲಿನ ಮಳೆ ದುರಸ್ಥಿ ಯೋಜನೆಯಡಿಯಲ್ಲಿ ರೂ 0.499 ಕೋಟಿ ಮೊತ್ತದಲ್ಲಿ ಕೈಗೊಂಡು ದಿನಾಂಕ:13.06.2022 ರಂದು ಪೂರ್ಣಗೊಳಿಸಲಾಗಿರುತ್ತದೆ. ಪ್ರಸ್ತುತ, 2023–24 ನೇ ವಾರ್ಷಿಕ ಯೋಜನೆಯಲ್ಲಿ ಸದರಿ ಸರಪಳಿಯ ಸದರಿ ರಸ್ತೆಯನ್ನು ದ್ವಿಪಥ ರಸ್ತೆಗೆ ಅಗಲೀಕರಿಸುವ ಕಾಮಗಾರಿಯು ರೂ.343.75 ಕೋಟಿ ಮೊತ್ತಗಳಿಗೆ ಅನುಮೋದನೆಗೊಂಡಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.
- ಚಾರ್ಮಡಿ ಘಾಟ್‌ನ ಕಿ.ಮೀ 86.200 ರಿಂದ 99.200 ವರೆಗಿನ ಭಾಗವು ಮೀಸಲು ಅರಣ್ಯ ಪ್ರದೇಶದಲ್ಲಿ ಸಾಗುತ್ತಿದ್ದು, ಈ ಪ್ರದೇಶವು ಅಧಿಕ ಮಳೆಯಿಂದ ಕೂಡಿದ್ದು, ಅತಿ ಸೂಕ್ಷ್ಮ ಪಶ್ಚಿಮ ಘಾಟ್ ಪ್ರದೇಶವಾಗಿರುವುದರಿಂದ ಸೀಮಿತ ಅಭಿವೃಧ್ಧಿ ಕಾಮಗಾರಿಗಳನ್ನಷ್ಟೇ ಕೈಗೊಳ್ಳಬಹುದಾಗಿರುತ್ತದೆ. ಆದರೂ ಸಹ, ಚಾರ್ಮಡಿ ಘಾಟ್‌ನ ಭಾಗದ ರಸ್ತೆಯನ್ನು ಸುಗಮ ಸಂಚಾರಕ್ಕೆ 10 ಮೀಟರ್ ಅಗಲಕ್ಕೆ ಅಗಲೀಕರಣಗೊಳಿಸುವ ಕಾಮಗಾರಿಗೆ (Two lane with paved shoulder) ಕೇಂದ್ರ ಭೂ ಸಾರಿಗೆ ಮಂತ್ರಾಲಯದ 2024–25ನೇ ಸಾಲಿನ ಅನುಮೋದಿತ ವಾರ್ಷಿಕ ಕ್ರಿಯಾಯೋಜನೆಯಡಿಯಲ್ಲಿ ಸೇರಿದ್ದು ವಿವರವಾದ ಯೋಜನಾ ವರದಿ ತಯಾರಿಸಲು ಟೆಂಡರ್ ಆಹ್ವಾನಿಸಿದ್ದು, ಈ ಕಾಮಗಾರಿಯನ್ನು ಕೈಗೊಳ್ಳುವುದರಿಂದ ಚಾರ್ಮಡಿಘಾಟ್‌ನ ಭಾಗದಲ್ಲಿ ಸುಗಮ ಸಂಚಾರಕ್ಕೆ ಶಾಶ್ವತ ಪರಿಹಾರ ದೊರೆಯುತ್ತದೆ.
- ಪ್ರಸ್ತಾಪಿತ ರಸ್ತೆಯ ನಿರ್ವಹಣೆ ಕಾಮಗಾರಿಯನ್ನು Short Term Maintenance Contract (STMC) ಯೋಜನೆಯಡಿಯಲ್ಲಿ ಕೈಗೊಳ್ಳಲು ಕ್ರಮ ವಹಿಸಲಾಗಿದೆ.

3. **ಆಗುಂಬೆ ಘಾಟ್:**

- ಆಗುಂಬೆ ಘಾಟ್ ಭಾಗವು ರಾಷ್ಟ್ರೀಯ ಹೆದ್ದಾರಿ–169ಎ ರ ಕಿ.ಮೀ 33.00 ರಿಂದ ಕಿ.ಮೀ 41.00ರವರೆಗೆ ಹಾದು ಹೋಗಿದ್ದು, 8 ಕಿ.ಮೀ ಉದ್ದವಿದ್ದು ಸದರಿ ಭಾಗದಲ್ಲಿ ಸಣ್ಣಪುಟ್ಟ ಗುಡ್ಡ ಕುಸಿತ ಉಂಟಾಗಿದ್ದು, ಕೂಡಲೇ ದುರಸ್ತಿಪಡಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ.
- ಆಗುಂಬೆ ಘಾಟ್ ರಸ್ತೆಯನ್ನು ಅಭಿವೃದ್ಧಿಗೊಳಿಸಲು (ಅಗಲೀಕರಣ ಇತ್ಯಾದಿ) 2024–25ನೇ ಸಾಲಿನಲ್ಲಿ ರೂ.403.00 ಕೋಟಿ ಅನುದಾನವನ್ನು ನಿಗಧಿಪಡಿಸಲಾಗಿದ್ದು, ವಿಸ್ತೃತ ಯೋಜನಾ ವರದಿ ತಯಾರಿಸಲು ಸಮಾಲೋಚಕರನ್ನು (Consultancy) ನೇಮಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.
- Short term maintenance contract (STMC) ಯೋಜನೆಯಡಿ ರೂ.2.68 ಕೋಟಿ ಮೊತ್ತಕ್ಕೆ ನಿರ್ವಹಣೆ ಕಾಮಗಾರಿಯನ್ನು ಕೈಗೊಂಡು ವಾಹನಗಳ ಸುಗಮ ಸಂಚಾರಕ್ಕೆ ಕ್ರಮವಹಿಸಲಾಗಿರುತ್ತದೆ. ಹಾಗೂ ಮುಜಾಂಗ್ರತಾ ಕ್ರಮವಾಗಿ ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆ ಇವರ ಆದೇಶ ದಿನಾಂಕ: 27–06–2024ರಲ್ಲಿ ಆಗುಂಬೆ ಘಾಟ್ ರಸ್ತೆಯಲ್ಲಿ ದಿನಾಂಕ:27–06–2024 ರಿಂದ 15-09–2024ರವರೆಗೆ ತಾತ್ಕಾಲಿಕವಾಗಿ ಭಾರಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿರುತ್ತದೆ.

4. **ನಿಟ್ಟೂರು (ನಾಗೋಡಿ ಘಾಟ್):**

- ನಿಟ್ಟೂರು (ನಾಗೋಡಿ ಘಾಟ್) ಭಾಗವು ರಾಷ್ಟ್ರೀಯ ಹೆದ್ದಾರಿ 766ಸಿ ಕಿ.ಮೀ 28.00 ರಿಂದ ಕಿ.ಮೀ 43.40ರವರೆಗೆ ಹಾದು ಹೋಗಿರುತ್ತದೆ.
- ಸದರಿ ಭಾಗದಲ್ಲಿ ಮಳೆಗಾಲ ಪೂರ್ವ/ಮಳೆಗಾಲದಲ್ಲಿ ನಿರಂತರವಾಗಿ ಜಂಗಲ್ ತೆಗೆಯುವುದು, ಚರಂಡಿ ಸ್ವಚ್ಛಗೊಳಿಸುವುದು ಇತ್ಯಾದಿ ನಿರ್ವಹಣೆ ಕಾಮಗಾರಿಗಳಿಗೆ 2023–24ನೇ ಸಾಲಿನಲ್ಲಿ ಕೇಂದ್ರ ಭೂ ಸಾರಿಗೆ ಮಂತ್ರಾಲಯದಿಂದ STMC ಯೋಜನೆಯಡಿ ರೂ.2.68 ಕೋಟಿ ಮೊತ್ತಕ್ಕೆ ಅನುಮೋದನೆ ದೊರೆತ್ತಿದ್ದು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ಕ್ರಮವಹಿಸಲಾಗಿರುತ್ತದೆ.

5. **ಸಂಪಾಜೆಘಾಟ್**

- ರಾಷ್ಟ್ರೀಯ ಹೆದ್ದಾರಿ 275 ರ ಕಿ.ಮೀ. 71.60 (ಸಂಪಾಜೆ) ರಿಂದ 110.00 (ಕೆದಕಲ್) ರವರೆಗೆ ಸಂಪಾಜೆಘಾಟ್ ಆಗಿದ್ದು, ಒಟ್ಟು 38.400 ಕಿ.ಮೀ ರಸ್ತೆ ಆಗಿರುತ್ತದೆ.
- 2018 ರ ಸಾಲಿನ ಮಳೆಗಾಲದ ಪ್ರಕೃತಿ ವಿಕೋಪದಡಿಯಲ್ಲಿ ಸಂಪಾಜೆ ಘಾಟ್‌ನಲ್ಲಿ ಉಂಟಾದ ಗುಡ್ಡಗಳ ಕುಸಿತ ಹಾಗೂ ಹಾಳಾದ ರಸ್ತೆಯ ಭಾಗವನ್ನು ತಕ್ಷಣವೇ ತಾತ್ಕಾಲಿಕವಾಗಿ ದುರಸ್ತಿ ಕಾರ್ಯ ನಿರ್ವಹಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ. ಅಲ್ಲದೆ, ಕಿ.ಮೀ 71.600 ರಿಂದ 93.200 ರವರೆಗೆ ಶಾಶ್ವತ ದುರಸ್ತಿಗಾಗಿ ರಸ್ತೆ ಬಲಪಡಿಸುವ ಕಾಮಗಾರಿಯನ್ನು ರೂ.21.78ಕೋಟಿ ಮೊತ್ತಕ್ಕೆ ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದಿಂದ ಅನುಮೋದನೆಗೊಂಡಿದ್ದು ದಿನಾಂಕ: 08.06.2019 ರಂದು ಪೂರ್ಣಗೊಳಿಸಲಾಗಿರುತ್ತದೆ.
- 2019–20ನೇ ಸಾಲಿನಲ್ಲಿ ಕೇಂದ್ರ ಭೂ ಸಾರಿಗೆ ಮಂತ್ರಾಲಯ, ನವದೆಹಲಿ ಇವರಿಂದ ರೂ.58.50 ಕೋಟಿಗಳಿಗೆ ಅನುಮೋದನೆಗೊಂಡ ರಾಷ್ಟ್ರೀಯ ಹೆದ್ದಾರಿ–275ರ ಕಿ.ಮೀ 71.600 ರಿಂದ 110.00 ರವರೆಗಿನ ಸಂಪಾಜೆಘಾಟ್‌ನ ಕಣಿವೆ ಭಾಗಗಳಲ್ಲಿ ಆಯ್ದ ಭಾಗಗಳಲ್ಲಿ ಶಾಶ್ವತ ದುರಸ್ತಿಗಾಗಿ 18 ಕಡೆ ತಡೆಗೋಡೆ ನಿರ್ಮಾಣ, ಆರ್.ಸಿ.ಸಿ ಡ್ರೈನ್ಸ್ ಮತ್ತು ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಂಡು

ದಿನಾಂಕ:30.11.2022ರಂದು ಪೂರ್ಣಗೊಳಿಸಲಾಗಿದ್ದು, ಅದರಂತೆ ಪ್ರಸ್ತುತ ಡಿ.ಎಲ್.ಪಿ (Defect Liability Period) ಯಲ್ಲಿದ್ದು, ರಸ್ತೆ ನಿರ್ವಹಣೆ ಕಾಮಗಾರಿಯನ್ನು ಕೈಗೊಂಡು ಸಾರ್ವಜನಿಕರ ಸುಗಮ ಸಂಚಾರಕ್ಕೆ ಯೋಗ್ಯವಾಗಿರಿಸಲಾಗಿದೆ.

- ಪ್ರಸ್ತುತ, 2024–25 ಸಾಲಿನಲ್ಲಿ ವಾರ್ಷಿಕ ಯೋಜನೆಯಡಿ ಸಂಪಾಜೆಘಾಟ್‌ನಲ್ಲಿ ಮತ್ತು ಇತರೆ 21 ಕಡೆಗಳಲ್ಲಿನ ಕಣಿವೆ ಭಾಗಗಳಲ್ಲಿ ರಸ್ತೆಯ ಭುಜ ಭಾಗವು ಕುಸಿತಗೊಳ್ಳುವ ಸಂಭವವಿರುವುದರಿಂದ ತಡೆಗೋಡೆಗಳನ್ನು ನಿರ್ಮಿಸುವ ಕಾಮಗಾರಿಗೆ ವಾರ್ಷಿಕ ಯೋಜನೆಯಡಿ ರೂ 90.00 ಕೋಟಿಗಳಿಗೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ ವತಿಯಿಂದ ಮಂಜೂರಾತಿ ದೊರೆತಿರುತ್ತದೆ. ಪ್ರಸ್ತುತ, ವಿಸ್ತೃತಯೋಜನಾ ವರದಿ (ಡಿ.ಪಿ.ಆರ್) ತಯಾರಿಕಾ ಹಂತದಲ್ಲಿರುತ್ತದೆ.
- ಉಳಿದಂತೆ ಮೇಲೆ ತಿಳಿಸಿದ ಎಲ್ಲಾ ಸರಪಳಿಗಳಲ್ಲಿ ಪ್ರತಿ ಮಳೆಗಾಲದಲ್ಲಿ ಸಂಪಾಜೆಘಾಟ್ ಸೆಕ್ಷನ್ ಕಿ.ಮೀ 71.600 ರಿಂದ 132.314 ರವರೆಗೆ ಮಳೆಯ ಪ್ರಮಾಣ ಹೆಚ್ಚಿರುವುದರಿಂದ ಮಳೆಗಾಲ ಮುಗಿಯುವವರೆಗೆ ಪ್ರತಿ ನಿತ್ಯವು ಉಂಟಾಗುವ ಭೂಕುಸಿತವನ್ನು ತೆರವು ಗೊಳಿಸುವುದು ಡ್ರೈನೇಜ್ ಬ್ಲಾಕ್‌ಗಳನ್ನು ತೆರವುಗೊಳಿಸಿ ಡ್ರೈನೇಜ್ ನೀರು ಸರಾಗ ವಾಗಿ ಡ್ರೈನೇಜ್‌ನಲ್ಲಿ ಹರಿಯುವಂತೆ ಮಾಡುವುದು, ರಸ್ತೆಯ ಮೇಲೆ ಬೀಳುವ ಮರಗಳನ್ನು ತೆರವುಗೊಳಿಸುವುದು ಹಾಗೂ ಕೊರೆದು ಹೋಗಿರುವ ರಸ್ತೆಯ ಭುಜಗಳನ್ನು ಸಮತಟ್ಟು ಮಾಡುವುದು ರಸ್ತೆಯ ಇಕ್ಕೆಲಗಳಲ್ಲಿ ಬೆಳೆಯುವ ಕಾಡುಗಿಡಗಳನ್ನು ತೆರವುಗೊಳಿಸಿ ವಾಹನ ಸವಾರರು ಸುರಕ್ಷಿತವಾಗಿ ಸಂಚರಿಸುವಂತೆ ಮಾಡುವುದು, ದುರಸ್ಥಿಗೊಂಡಿರುವ ರಸ್ತೆಯ ಗುಂಡಿಗಳನ್ನು ತಕ್ಷಣ ಸರಿಪಡಿಸುವುದು ಇತ್ಯಾದಿ ವಾರ್ಷಿಕ ನಿರ್ವಹಣಾ ಕಾಮಗಾರಿಗಳನ್ನು ಆಯಾ ಗುತ್ತಿಗೆದಾರರು ನಿರ್ವಹಿಸುತ್ತಿರುತ್ತಾರೆ.

**6. ಬಿಸ್ಲೇ ಘಾಟ್:**

- ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟ್ಟಡ, ಕೇಂದ್ರ ವಲಯದ ಮಂಗಳೂರು ವಿಭಾಗದ ಅಧೀನದಲ್ಲಿರುವ ಸುಳ್ಯ ಉಪವಿಭಾಗದ ವ್ಯಾಪ್ತಿಗೆ ಬರುವ ಬೆಂಗಳೂರು–ಜಾಲ್ಸೂರು ರಾಜ್ಯ ಹೆದ್ದಾರಿ ಸಂಖ್ಯೆ: 85 ರಲ್ಲಿ ಕಿ.ಮೀ.278.38 ರಿಂದ 283.20 ವರೆಗೆ 4.680 ಕಿ.ಮೀ. ಉದ್ದದ ರಸ್ತೆಯು ಬಿಸ್ಲೇ ಘಾಟ್ ಪ್ರದೇಶವಾಗಿದ್ದು, ಈ ಭಾಗದಲ್ಲಿ ಯಾವುದೇ ರೀತಿಯ ಭೂ ಕುಸಿತ ಉಂಟಾಗಿ ಸಂಚಾರ ವ್ಯತ್ಯಯವಾಗಿರುವುದಿಲ್ಲ. ಪ್ರಸ್ತುತ ಸದರಿ ಸರಪಳಿಯಲ್ಲಿ ಎಸ್.ಹೆಚ್.ಡಿಪಿ. ವತಿಯಿಂದ ರಸ್ತೆ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

**7. ಬಾಳೆಬರೆ ಘಾಟ್:**

- ಹೊಸನಗರ ಹಾಗೂ ಕುಂದಾಪುರ ಉಪ ವಿಭಾಗ ವ್ಯಾಪ್ತಿಯ ತೀರ್ಥಹಳ್ಳಿ–ಕುಂದಾಪುರ (ರಾ.ಹೆ–52) ರಸ್ತೆಯು ಘಾಟಿ ಪ್ರದೇಶದಲ್ಲಿ ಹಾದು ಹೋಗುತ್ತದೆ.
- ಹೊಸನಗರ ಉಪ ವಿಭಾಗ ವ್ಯಾಪ್ತಿಯಲ್ಲಿ 2021–22 ನೇ ಸಾಲಿನಲ್ಲಿ ಕಿ.ಮೀ.138.00 ರಿಂದ ಕಿ.ಮೀ.143.70 ವರೆಗೆ ಒಟ್ಟು 5.70 ಕಿ.ಮೀ ಉದ್ದದ ರಸ್ತೆಯು ಬಾಳೆಬರೆ ಘಾಟ್ ಪ್ರದೇಶವಾಗಿದ್ದು, ಸದರಿ ರಸ್ತೆಯನ್ನು 7.00 ಮೀ. ಅಗಲಕ್ಕೆ ಕಾಂಕ್ರೀಟ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಿ ಸಂಚಾರ ಯೋಗ್ಯವನ್ನಾಗಿ ಇಡಲಾಗಿದೆ.
- ಕುಂದಾಪುರ ಉಪವಿಭಾಗ ವ್ಯಾಪ್ತಿಯಲ್ಲಿ ರಸ್ತೆಯ ಕಿ.ಮೀ.48.40 ರಿಂದ 53.00 ರ ವರೆಗೆ ಬಾಳೆಬರೆ ಘಟ್ಟ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಕಿ.ಮೀ.46.40 ರಿಂದ 48.40 ರ ವರೆಗಿನ ರಸ್ತೆಯು 2012–13 ನೇ

ಸಾಲಿನಲ್ಲಿ 7.00 ಮೀ. ಅಗಲಕ್ಕೆ ಕಾಂಕ್ರೀಟ್ ರಸ್ತೆಯಾಗಿ ಹಾಗೂ ಕಿ.ಮೀ.48.40 ರಿಂದ 49.30 ರ ವರೆಗೆ 2021-22 ನೇ ಸಾಲಿನಲ್ಲಿ 7.00 ಮೀ. ಅಗಲಕ್ಕೆ ಕಾಂಕ್ರೀಟ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿರುತ್ತದೆ. ಉಳಿದಂತೆ ಈ ರಸ್ತೆಯ ಕಿ.ಮೀ.49.30 ರಿಂದ 53.00 ರ ವರೆಗೆ ರಸ್ತೆಯು 5.50 ಮೀ. ಅಗಲದ ಡಾಂಬರು ರಸ್ತೆಯಾಗಿರುತ್ತದೆ. ಸದರಿ ರಸ್ತೆಯಲ್ಲಿ ಇದುವರೆಗೂ ಹೆದ್ದಾರಿ ಕುಸಿತ ಅಥವಾ ಗುಡ್ಡಕುಸಿತವಾಗಿ ಇದುವರೆಗೂ ಯಾವುದೇ ಅಡಚಣೆಯಾಗದಂತೆ ವಾಹನಗಳ ಸಂಚಾರವಾಗುತ್ತಿದ್ದು, ಸಂಚಾರಕ್ಕೆ ಯಾವುದೇ ವ್ಯತ್ಯಯ ಉಂಟಾಗಿರುವುದಿಲ್ಲ.

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಸಂಖ್ಯೆ: ಲೋಇ 130 ಸಿಎನ್‌ಹೆಚ್ 2024 (ಇ)